# كتاب التوحيد

# ಕಿತಾಬುತ್ತೌಹೀದ್

(ಸೌದಿ ಅರೇಬಿಯಾದ ಹಿರಿಯ ವಿದ್ವಾಂಸರ ವಿವರಣೆಗಳನ್ನು
ಆಧಾರವಾಗಿಟ್ಟುಕೊಂಡು ನಡೆಸಲಾದ ದರ್ಸ್)

ಭಾಗ 04

ಅಬೂ ಹಮ್ಮಾದ್ ಸಲಾಹುದ್ದೀನ್

بِسْمِ ٱللَّهِ ٱلرَّحْمَٰنِ ٱلرَّحِيمِ

(ತನ್ನ ಸೃಷ್ಟಿಗಳಿಗೆ) ಅಪಾರ ದಯಾಮಯನೂ, (ತನ್ನ ನೈಜ ವಿಶ್ವಾಸಿಗಳಾದ ದಾಸರಿಗೆ) ಸದಾ ಕರುಣಾಮಯಿಯೂ ಆದ ಅಲ್ಲಾಹುವಿನ ನಾಮದಿಂದ.

ಸರ್ವಸ್ತುತಿಗಳೂ ಸಕಲಲೋಕಗಳ ರಬ್ಬ್‌ಆದ (ಪರಿಪಾಲಕನಾದ) ಅಲ್ಲಾಹುವಿಗೆ ಮೀಸಲು. ಅಂತಿಮ ವಿಜಯವು ಅಲ್ಲಾಹುವಿನ ಭಯಭಕ್ತಿ ಹಾಗೂ ಅವನ ಆಜ್ಞೆ–ನಿಷೇಧಗಳನ್ನು ಪಾಲಿಸುವವರಿಗಾಗಿದೆ. ಅಕ್ರಮಿಗಳ ಹೊರತು (ಇತರರ ವಿರುದ್ಧ) ವೈಷಮ್ಯವಿಲ್ಲ. ಸಜ್ಜನ ದಾಸರ ರಕ್ಷಕನಾದ ಅಲ್ಲಾಹುವಿನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಪ್ರಾಮಾಣಿಕ ಪ್ರವಾದಿಯಾದ ಮುಹಮ್ಮದ್ (ﷺ) ರವರು ಅವನ (ಅಲ್ಲಾಹುವಿನ) ದಾಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್ (ﷺ) ರವರ ಮೇಲೂ, ಅವರ ಕುಟುಂಬದವರ ಮೇಲೂ, ಅವರ ಸಹಚರರ (ಸಹಾಬಾಗಳ) ಮೇಲೂ ಹಾಗೂ ಪ್ರತಿಫಲದ ದಿನದ ತನಕ ಅವರನ್ನು ಅತ್ಯುತ್ತಮ ರೀತಿಯಲ್ಲಿ ಅನುಸರಿಸಿದವರ ಮೇಲೂ ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ಇರಲಿ.

ಮುಂದುವರಿದು ಹೇಳುವುದೇನೆಂದರೆ :

ಅಲ್ಲಾಹುವಿನ ದಾಸರೇ, ನಾವೀಗ ಕಲಿಯುತ್ತಿರುವುದು **'ಕಿತಾಬ್ ಅತ್ತೌಹೀದ್'** ಈ ಗ್ರಂಥದ ವಿವರಣೆಯಾಗಿದೆ. ಇದು ಆ ಸರಣಿಯ ನಾಲ್ಕನೆಯ ತರಗತಿಯಾಗಿದೆ.

ಪ್ರಸ್ತುತವಾಗಿ ನಾವು ಕಲಿಯುತ್ತಿರುವ ಗ್ರಂಥದ ಲೇಖಕರಾಗಿದ್ದಾರೆ ಅಶ್ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ). ಇವರ ಕುರಿತಾಗಿದೆ ಅನೇಕ ಪಥಭ್ರಷ್ಟರಾದ ಜನರು 'ವಹ್ಹಾಬಿ' ಎಂದು ಕರೆಯುತ್ತಾ ಆಕ್ಷೇಪಿಸುತ್ತಿರುವುದು. ಜನರು ಅವರನ್ನು ತೀವ್ರವಾದಿಯೆಂದು ಬಿಂಬಿಸುತ್ತಿರುವುದನ್ನೂ ಹಾಗೂ ಅಲ್ಲಸಲ್ಲದ ಆರೋಪಗಳನ್ನು ಅವರ ಮೇಲೆ ಹೊರಿಸುತ್ತಿರುವುದನ್ನೂ ನಾವು ಕಾಣುತ್ತಿದ್ದೇವೆ. ಈ ರೀತಿಯಾಗಿ ಆರೋಪಿಸುವವರಲ್ಲಿ ಎರಡು ವಿಧದ ಜನರಿದ್ದಾರೆ. ಒಂದನೆಯದಾಗಿ ಈ ಮಹಾನ್ ವಿದ್ವಾಂಸರ ಕುರಿತು ಅರಿವಿಲ್ಲದವರು ಅಥವಾ ಸರಿಯಾದ ಜ್ಞಾನವಿಲ್ಲದವರು, ಎರಡನೆಯದಾಗಿ ದುರುದ್ದೇಶದಿಂದ ಅವರ ಮೇಲೆ ಆರೋಪ ಹೊರಿಸುವವರು. ಈ ಇಬ್ಬರ ಹೊರತು ಯಾರೊಬ್ಬರೂ ಸಹ ಈ ಶ್ರೇಷ್ಠವಾದ ವಿದ್ವಾಂಸ ಅಲ್-ಇಮಾಮ್ ಅಶ್ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ) ರವರನ್ನು ಆಕ್ಷೇಪಿಸಲಾರನು ಅಥವಾ ದೂಷಿಸಲಾರನು.

ಹಾಗಾದರೆ, ಯಾರಾಗಿದ್ದಾರೆ ಇಮಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ)? ಈ ತರಗತಿಯಲ್ಲಿ ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಕಲಿಯಲು ನಾವು ಪ್ರಯತ್ನಿಸೋಣ. ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ ٱللَّهُ) ರವರು 'ಕಿತಾಬ್ ಅತ್ತೌಹೀದ್' ಈ ಗ್ರಂಥದ ವಿವರಣಾ ಕೃತಿಗಳಾದ ಇಆನತುಲ್ ಮುಸ್ತಫೀದ್ ಬಿ ಶರ್ಹಿ ಕಿತಾಬಿತ್ತೌಹೀದ್ (إعانة المستفيد بشرح كتاب التوحيد) ಹಾಗೂ ಅಲ್-ಮುಲಕ್ಕಸ್ ಫೀ ಶರ್ಹಿ ಕಿತಾಬಿತ್ತೌಹೀದ್ (الملخص في شرح كتاب التوحيد) ಇವುಗಳ ಮುನ್ನುಡಿಯಲ್ಲಿ ಉಲ್ಲೇಖಿಸಿದ ವಿಷಯಗಳ ಅಧಾರದಲ್ಲಾಗಿದೆ ನಾನು ಅವರ ಜೀವನ ಚರಿತ್ರೆಯನ್ನು ವಿವರಿಸಲಿರುವುದು. (إِن شَآءَ ٱللَّهُ)

## ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರ ಜೀವನ ಚರಿತ್ರೆ : ಒಂದು ಸಂಕ್ಷಿಪ್ತ ಅವಲೋಕನ

ಅವರ ಪೂರ್ಣ ಹೆಸರು **'ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ ಬಿನ್ ಸುಲೈಮಾನ್ ಬಿನ್ ಅಲೀ'** ಎಂದಾಗಿದೆ. ಅವರು ಹೆಸರಾಂತ ಗೋತ್ರವಾಗಿದ್ದ ಬನೂ ತಮೀಮ್ ಇದರ 'ಮಶರ್ರಫ್' ಎಂಬ ಕುಟುಂಬಕ್ಕೆ ಸೇರಿದವರಾಗಿದ್ದರು. ಮತ್ತು ಅವರು ನಜ್ದ್ ಮತ್ತು ಇನ್ನಿತರ ಪ್ರದೇಶಗಳ ಸಲಫಿ ದಅ್‌ವತ್‌ನ ಇಮಾಮ್ ಆಗಿದ್ದರು. ಅಂದರೆ ಪ್ರವಾದಿ (صَلَّىٰ ٱللَّٰهُ عَلَيْهِ وَسَلَّمَ) ಹಾಗೂ ಅವರ ಸಹಚರರು (ಸಹಾಬಿಗಳು) ಯಾವ ಮಾರ್ಗದಲ್ಲಿದ್ದರೋ ಆ ಮಾರ್ಗದೆಡೆಗೆ ಆಹ್ವಾನಿಸುತ್ತಿದ್ದ ಶ್ರೇಷ್ಠ ವಿದ್ವಾಂಸರಾಗಿದ್ದರು.

ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರು ಹಿಜ್ರೀ ವರ್ಷ 1115 ರಲ್ಲಿ ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನ ವಾಯುವ್ಯ ದಿಕ್ಕಿನಿಂದ 70 ಕಿ.ಮೀ ದೂರದಲ್ಲಿರುವ ಉಯಯ್‌ನಃ ಎಂಬ ಪಟ್ಟಣದಲ್ಲಿ ಜನಿಸಿದರು. ಅವರು ಉನ್ನತ ಮತ್ತು ಗೌರವಾನ್ವಿತ ವಿದ್ವಾಂಸರ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರ ತಂದೆ **ಶೈಖ್ ಅಬ್ದುಲ್ ವಹ್ಹಾಬ್ ಬಿನ್ ಸುಲೈಮಾನ್** (رَحِمَهُ ٱللَّٰهُ) ರವರು ಹಿರಿಯ ವಿದ್ವಾಂಸರೂ ಆ ಪ್ರದೇಶದ ಖಾಝೀ ಅರ್ಥಾತ್ ನ್ಯಾಯಾಧೀಶರೂ ಆಗಿದ್ದರು. ಅವರ ತಾತ, ಶೈಖ್ ಸುಲೈಮಾನ್ ಬಿನ್ ಅಲೀ ರವರು ನಜ್ದ್ ಊರಿನ ಮುಫ್ತಿಯೂ ಹಾಗೂ ವಿದ್ವಾಂಸರ ಪೈಕಿ ಪ್ರಮುಖರೂ ಆಗಿದ್ದರು. ಅವರ ಸೋದರಸಂಬಂಧಿಯರೂ ಸಹ ಇಲ್ಮ್ ಹೊಂದಿದ್ದವರೂ ಧಾರ್ಮಿಕವಾಗಿ ಔನ್ನತ್ಯ ಪಡೆದವರಾಗಿದ್ದರು.

ಅವರ ಜನನ ಸ್ಥಳವಾದ ಉಯಯ್‌ನಃ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳು (ಸಿರಿಯಾ, ಫೆಲಸ್ತೀನ್ ಮುಂತಾದವುಗಳು) ಉಲಮಾಗಳಿಂದ ನೆರೆದ ಬೀಡಾಗಿತ್ತು. ಆ ಊರಲ್ಲಿ ಫಿಕ್‌ಹ್‌ನ (ಕರ್ಮಶಾಸ್ತ್ರದ) ಅಗಾಧ ಪಾಂಡಿತ್ಯ ಹೊಂದಿದ್ದ

ಉಲಮಾಗಳಿದ್ದರು. ಇಂತಹ ಉಲಮಾಗಳ ನಡುವೆ ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರು ಜನಿಸಿ ಬೆಳೆದರು. ಅವರು ತಮ್ಮ ಬಾಲ್ಯಾವಧಿಯಲ್ಲೇ ಕುರ್‌ಆನನ್ನು (ಸಂಪೂರ್ಣವಾಗಿ) ಕಂಠಪಾಠ ಮಾಡಿದ್ದರು. ಹೀಗೆ ಇನ್ನಿತರ ಅನೇಕ ಉಲಮಾಗಳ ಜೀವನ ಚರಿತ್ರೆಯನ್ನು ನಾವು ನೋಡುವುದಾದರೆ ಅವರ ಪೈಕಿ ಹೆಚ್ಚಿನವರೂ ಕುರ್‌ಆನನ್ನು ತಮ್ಮ ಬಾಲ್ಯಾವಧಿಯಲ್ಲೇ ಸಂಪೂರ್ಣವಾಗಿ ಕಂಠಪಾಠ ಮಾಡಿರುವುದನ್ನು ನಾವು ಕಾಣಬಹುದಾಗಿದೆ.

ನಂತರ ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರು ಫಿಕ್‌ಹ್, ತಫ್‌ಸೀರ್, ಹದೀಸ್ ಮುಂತಾದ ವಿಷಯಗಳನ್ನು ಅಂದಿನ ಕಾಲದ ಉಯಯ್‌ನಃದ ನ್ಯಾಯಾಧೀಶರಾಗಿದ್ದ ತಮ್ಮ ತಂದೆಯವರೊಡನೆ ಕಲಿತುಕೊಂಡರು. ಫಲದಾಯಕ ಇಲ್ಮ್‌ಅನ್ನು (ಜ್ಞಾನವನ್ನು) ಕಲಿತುಕೊಂಡ ಉಲಮಾಗಳು ತಮ್ಮ ಮಕ್ಕಳನ್ನು ಪೋಷಿಸಿ ಬೆಳೆಸಿರುವುದು ಇಲ್ಮ್‌ನ ಮೂಲಕವೇ ಆಗಿದೆ. ಮನೆಯೇ ಮೊದಲ ಪಾಠ ಶಾಲೆ ಎಂಬುದಕ್ಕೆ ಇದೊಂದು ಸೂಕ್ತ ಉದಾಹರಣೆಯಾಗಿದೆ.

ಹೀಗೆ ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರು ತಮ್ಮ ಶಿಕ್ಷಣವನ್ನು ತಮ್ಮ ತಂದೆಯವರೊಂದಿಗೆ ಮಾತ್ರ ಸೀಮಿತವಾಗಿರಿಸದೇ ನಜ್ದ್, ಮದೀನಃ, ಅಲ್-ಅಹ್ಸಾ ಮತ್ತು ಬಸ್ರಾದ ಇನ್ನಿತರ ಪ್ರದೇಶಗಳ ಪ್ರಸಿದ್ಧ ಉಲಮಾಗಳೊಂದಿಗೂ ಪಡೆದುಕೊಂಡರು. ಈ ಕಾರಣದಿಂದಾಗಿ ನವೀನಾಚಾರಗಳು (ಬಿದ್‌ಅತ್‌ಗಳು), ಸಮಾಧಿಗಳು, ಮರಗಳು ಮತ್ತು ಕಲ್ಲುಗಳೊಂದಿಗೆ ಆಶೀರ್ವಾದವನ್ನು ಬೇಡುವುದು ಮುಂತಾದ ಮೂಢನಂಬಿಕೆ ಮತ್ತು ಆಚಾರಗಳು ವ್ಯಾಪಕವಾಗಿ ಚದುರಿಹೋಗಿದ್ದ ಕಾಲಘಟ್ಟದಲ್ಲಿ, ಇಸ್ಲಾಮಿನ ನೈಜ ಸಂದೇಶದ ದಅ್‌ವಾವನ್ನು (ಆಹ್ವಾನವನ್ನು) ನೀಡಲು ಅವರು ಸಾಕಷ್ಟು ಇಲ್ಮ್‌ಅನ್ನು (ಜ್ಞಾನವನ್ನು) ಗಳಿಸಿ ಸರ್ವಸನ್ನದ್ಧರಾಗಿದ್ದರು.

ಅವರ ಕಾಲಘಟ್ಟದಲ್ಲಿದ್ದ ಹೆಚ್ಚಿನ ಉಲಮಾಗಳು ಜನರಿಗೆ ಯಾವುದು ಹೆಚ್ಚು ಅಗತ್ಯವಿದೆಯೋ ಅದನ್ನು (ಅರ್ಥಾತ್ ತೌಹೀದ್, ಅಕೀದಃ ಇತ್ಯಾದಿಗಳನ್ನು) ವಿವರಿಸದೆ ಕೇವಲ ಫಿಕ್‌ಹ್ ಹಾಗೂ ಇನ್ನಿತರ ವಿಷಯಗಳನ್ನು ಕಲಿಸುವುದರಲ್ಲಿ ನಿರತರಾಗಿದ್ದರು. ಸತ್ಯವನ್ನು ಮಿಥ್ಯದಿಂದ ಬೇರ್ಪಡಿಸಿ ಜನರಿಗೆ ತಿಳಿಹೇಳುವ ಬದಲು ಸಲಫ್‌ಗಳ ಅಕೀದಃಕ್ಕೆ (ವಿಶ್ವಾಸಗಳಿಗೆ) ವಿರುದ್ಧವಾದ ಅಕೀದಃವನ್ನು ಅವರು ಕಲಿಸಿಕೊಡುತ್ತಿದ್ದರು. ಉಲಮಾಗಳು ಪ್ರಥಮವಾಗಿ ಜನತೆಗೆ ಯಾವುದು ಹೆಚ್ಚು ಅಗತ್ಯವಾಗಿದೆಯೋ ಅವುಗಳಿಗೆ ಪ್ರಥಮ ಆದ್ಯತೆಯನ್ನು ನೀಡಿ ಅವರಿಗೆ ಸೂಕ್ತ ಮಾರ್ಗದರ್ಶನವನ್ನು ಕೊಡಬೇಕಾಗಿದೆ.

ರಸೂಲ್ (ﷺ) ರವರ ದಅ್‌ವಾ ಶೈಲಿಯನ್ನು ನಾವು ನೋಡುವುದಾದರೆ, ಅವರ (ﷺ) ಕಾಲಘಟ್ಟದಲ್ಲಿ ಮದ್ಯಪಾನ ಸೇವಿಸುವವರು, ವ್ಯಭಿಚಾರವೆಸಗುವವರು, ಹೆಣ್ಣು ಶಿಶುವೊಂದು ಜನಿಸಿದರೆ ಅದನ್ನು ಜೀವಂತವಾಗಿ ಹೂಳುತ್ತಿದ್ದವರು ಹೀಗೆ ಅನೇಕ ದುಷ್ಟಪ್ರವೃತ್ತಿಯ ಜನರಿದ್ದರೂ ಸಹ ರಸೂಲ್ (ﷺ) ರವರು ಪ್ರಥಮವಾಗಿ ಅವರನ್ನು ಆಹ್ವಾನಿಸಿದ್ದು ಸರಿಯಾದ (ಇಸ್ಲಾಮೀ) ವಿಶ್ವಾಸದೆಡೆಗಾಗಿತ್ತು. ಅವರು ಆಹ್ವಾನಿಸಿದ್ದು : "ಓ ಜನರೇ ನೀವು ಅಲ್ಲಾಹುವಿನ ಹೊರತು ಏನನ್ನೆಲ್ಲಾ ಆರಾಧಿಸುತ್ತಿರುವಿರೋ ಅವುಗಳಾವುದೂ ನಿಮ್ಮ ಸೃಷ್ಟಿಕರ್ತನಲ್ಲ, ಅವುಗಳು ನಿಮಗೆ ಉಪಕಾರವಾಗಲೀ ಉಪದ್ರವಾಗಲೀ ಮಾಡುವುದಿಲ್ಲ, ಹಾಗಾಗಿ ನಿಮ್ಮನ್ನೂ ಸರ್ವಲೋಕಗಳನ್ನೂ ಸೃಷ್ಟಿಸಿದ ಜಗದೊಡೆಯನೂ ಸಕಲ ಸೃಷ್ಟಿಗಳ ಪರಿಪಾಲಕನಾದ ಏಕೈಕನಾದ ಅಲ್ಲಾಹುವನ್ನು ಮಾತ್ರ ಆರಾಧಿಸಿರಿ ಅವನೊಂದಿಗೆ ಏನನ್ನೂ ಸಹಭಾಗಿಯನ್ನಾಗಿ ಮಾಡದಿರಿ (ಅರ್ಥಾತ್ ಅವನ ಹೊರತು ಅನ್ಯರಿಗೆ ಆರಾಧನೆಯಾಗಲೀ ಪ್ರಾರ್ಥನೆಯಾಗಲೀ ಅರ್ಪಿಸದಿರಿ ಅಥವಾ ಶಿರ್ಕ್ ಮಾಡದಿರಿ)" ಎಂದಾಗಿತ್ತು.

ಹೀಗೆ ಆದ್ಯವಾಗಿ ಅವರಿಗೆ ತೌಹೀದ್‌ನ ದಅ್‌ವತ್ ನೀಡಿ ಅವರಿಗೆ ಪರಲೋಕವನ್ನು ನೆನಪಿಸಿ, ನಂತರವಾಗಿತ್ತು ಮದ್ಯಪಾನ ಮಾಡುವುದನ್ನೂ, ವ್ಯಭಿಚಾರವೆಸಗುವುದನ್ನೂ, ಹೆಣ್ಣು ಶಿಶುವನ್ನು ಅನ್ಯಾಯವಾಗಿ ಕೊಲ್ಲುವುದನ್ನೂ ನಿಮ್ಮ ಸೃಷ್ಟಿಕರ್ತನು ನಿಷೇಧಿಸಿರುವನು ಹಾಗಾಗಿ ನೀವದನ್ನು ತೊರೆಯಬೇಕು, ನೀವು ನ್ಯಾಯ ಪಾಲಿಸಬೇಕು, ಸುಳ್ಳು, ವಂಚನೆ ಇತ್ಯಾದಿಗಳನ್ನು ನೀವು ಉಪೇಕ್ಷಿಸಬೇಕು ಎಂದವರು ಆಜ್ಞಾಪಿಸಿರುವುದು. ಹೀಗೆ ರಸೂಲ್ (ﷺ) ರವರ ದಅ್‌ವತ್ ಹಂತ-ಹಂತಗಳಲ್ಲಾಗಿತ್ತು. ಅವರು ಆದ್ಯವಾಗಿ ಪ್ರಾರಂಭಿಸಿದ್ದು ಮೂಲಕಾರ್ಯವಾದ ಅಕೀದಃದಿಂದಾಗಿತ್ತು (ಇಸ್ಲಾಮೀ ವಿಶ್ವಾಸದಿಂದಾಗಿತ್ತು). ಮಾತ್ರವಲ್ಲದೆ, ರಸೂಲ್ (ﷺ) ರವರ ಸಹಚರರ (ಸಹಾಬಿಗಳ) ದಅ್‌ವಾ ಶೈಲಿಯೂ ಅದೇ ರೀತಿಯಾಗಿತ್ತು.

ಮುಆದ್ ಬಿನ್ ಜಬಲ್ (رَضِيَ اللَّهُ عَنْهُ) ರವರನ್ನು ಯಮನ್‌ಗೆ ಕಳುಹಿಸುವಾಗ ಅವರೊಂದಿಗೆ ಪ್ರವಾದಿ (ﷺ) ರವರು ಹೇಳಿದ ಮಾತು :

« إِنَّكَ تَقْدَمُ عَلَى قَوْمٍ مِنْ أَهْلِ الْكِتَابِ فَلْيَكُنْ أَوَّلَ مَا تَدْعُوهُمْ إِلَى أَنْ يُوَحِّدُوا اللَّهَ تَعَالَى فَإِذَا عَرَفُوا ذَلِكَ فَأَخْبِرْهُمْ أَنَّ اللَّهَ فَرَضَ عَلَيْهِمْ خَمْسَ صَلَوَاتٍ فِي يَوْمِهِمْ وَلَيْلَتِهِمْ، فَإِذَا صَلُّوا فَأَخْبِرْهُمْ أَنَّ اللَّهَ افْتَرَضَ عَلَيْهِمْ زَكَاةً فِي أَمْوَالِهِمْ تُؤْخَذُ مِنْ غَنِيِّهِمْ فَتُرَدُّ عَلَى فَقِيرِهِمْ، فَإِذَا أَقَرُّوا بِذَلِكَ فَخُذْ مِنْهُمْ وَتَوَقَّ كَرَائِمَ أَمْوَالِ النَّاسِ »

**"ನೀನು ಹೋಗುತ್ತಿರುವುದು ಅಹ್ಲುಲ್-ಕಿತಾಬ್‌ನ ಜನತೆಯೆಡೆಗಾಗಿದೆ (ಅರ್ಥಾತ್ ಯಹೂದಿ ಹಾಗೂ ನಸಾರಗಳೆಡೆಗಾಗಿದೆ), ಹಾಗಾಗಿ ನೀನು ಪ್ರಥವಾಗಿ ಅವರನ್ನು ಆಹ್ವಾನಿಸಬೇಕಾಗಿರುವುದು ಮಹೋನ್ನತನಾದ ಅಲ್ಲಾಹುವಿನ ತೌಹೀದ್‌ನೆಡೆಗಾಗಿದೆ**

**(ಅಲ್ಲಾಹುವನ್ನು ಏಕಮಾತ್ರವಾಗಿ ಆರಾಧಿಸುವುದರೆಡೆಗಾಗಿದೆ). ಒಂದು ವೇಳೆ ಅದನ್ನವರು ಅರಿತುಕೊಂಡರೆ (ಹಾಗೂ ಸ್ವೀಕರಿಸಿಕೊಂಡರೆ), ಅವರಿಗೆ ತಿಳಿಸು : ಅವರ ಮೇಲೆ ಹಗಲಿರುಳಿನಲ್ಲಿ ಐದು ಹೊತ್ತಿನ ನಮಾಝುನ್ನು ಅಲ್ಲಾಹು ಕಡ್ಡಾಯಗೊಳಿಸಿರುವನು. ಅವರೊಂದುವೇಳೆ ನಮಾಝ್ ನಿರ್ವಹಿಸಿದರೆ, ಅವರಿಗೆ ತಿಳಿಸು : ಅವರ ಸಂಪತ್ತಿನ ಮೇಲೆ ಅಲ್ಲಾಹು ಝಕಾತನ್ನು ಆದೇಶಿಸಿರುವನು, ಅದು ಅವರ ಪೈಕಿ ಶ್ರೀಮಂತರಿಂದ ತೆಗೆದುಕೊಂಡು ಬಡವರಿಗೆ ನೀಡಬೇಕಾಗುವುದು. ಒಂದು ವೇಳೆ ಅದನ್ನವರು ಒಪ್ಪಿಕೊಂಡರೆ ಅವರಿಂದ ಝಕಾತನ್ನು ತೆಗೆದುಕೋ, ಆದರೆ ಜನರ ಅಮೂಲ್ಯ ಸಂಪತ್ತಿನಿಂದ (ಝಕಾತ್ ಪಡೆಯುವುದರಿಂದ) ದೂರವಿರು.”** [1]

ಹೀಗೆ ಹಂತ–ಹಂತಗಳಲ್ಲಾಗಿತ್ತು ರಸೂಲ್ (ﷺ) ರವರು ಜನರಿಗೆ ತಿಳಿಸಿಕೊಡಲು ಆಜ್ಞಾಪಿಸಿರುವುದು. ಅಡಿಪಾಯವಿಲ್ಲದೆ ನಿರ್ಮಿಸಿದ ಕಟ್ಟಡವು ಎಷ್ಟು ದುರ್ಬಲವೋ ಅದಕ್ಕಿಂತಲೂ ಬಲು ದುರ್ಬಲವಾದ ಕಾರ್ಯವಾಗಿದೆ ದೀನ್‌ನ ಮೂಲ ವಿಶ್ವಾಸವನ್ನು (ಅಕೀದಃವನ್ನು) ವಿವರಿಸಿಕೊಡದೆ ಕೇವಲ ಫಿಕ್‌ಹ್ ಹಾಗೂ ಇನ್ನಿತರ ವಿಷಯಗಳನ್ನು ಕಲಿಸಿಕೊಡುವುದು.

ಶಿರ್ಕ್ ಇಟ್ಟುಕೊಂಡು ಯಾರಾದರೂ ಇಬಾದತ್ (ಆರಾಧನೆ) ನಿರ್ವಹಿಸುವುದಾದರೆ ಆ ಇಬಾದತ್‌ಅನ್ನು ಅಲ್ಲಾಹು ಎಂದಿಗೂ ಸ್ವೀಕರಿಸಲಾರನು ಹಾಗೂ ಅದೆಂದಿಗೂ ಇಬಾದತ್ ಆಗಿ ಪರಿಗಣಿಸಲ್ಪಡದು. ವುದೂ ನಿರ್ವಹಿಸದೇ ಅಥವಾ ಮಾಲಿನ್ಯಗಳಿಂದ ಶುದ್ಧಿಯಾಗದೆ ಓರ್ವನು ನಮಾಝ್ ನಿರ್ವಹಿಸಿದರೆ ಹೇಗೆ ಅದು ನಮಾಝ್ ಆಗಿ ಪರಿಗಣಿಸಲ್ಪಡುವುದಿಲ್ಲವೋ ಅಥವಾ ಸ್ವೀಕಾರಾರ್ಹವಲ್ಲವೋ ಅದೇ ರೀತಿ ಶಿರ್ಕ್ ಇಟ್ಟುಕೊಂಡು ಇಬಾದತ್ ನಿರ್ವಹಿಸಿದರೆ ಅಲ್ಲಾಹು ಆ ಇಬಾದತ್‌ಅನ್ನು ಸ್ವೀಕರಿಸಲಾರನು. ಆ ಕರ್ಮವು ನಷ್ಟಹೊಂದುವುದು. ಇನ್ನು ಯಾರಾದರೂ ಅದೇ

1. ಸಹೀಹ್ ಅಲ್–ಬುಖಾರಿ : 7372

ಸ್ಥಿತಿಯಲ್ಲಿ ಮರಣಹೊಂದಿದರೆ ಅವರು ಎಂದೆಂದಿಗೂ ನರಕಾಗ್ನಿಯಲ್ಲಿ ಉಳಿಯುವರು. ಅವರಿಗೆ ಸ್ವರ್ಗವನ್ನು ಅಲ್ಲಾಹು ನಿಷಿದ್ಧಗೊಳಿಸಿರುವನು.

ಶೈಖ್ ಸಾಲಿಹ್ ಅಲ್-ಫೌಝಾನ್ (حفظه الله) ಹೇಳುತ್ತಾರೆ :

ಅಂದಿನ ಕಾಲಘಟ್ಟದ ಜನರು ಬಿದ್‌ಅತ್‌ಗಳು (ನವೀನಾಚಾರಗಳು), ಮೂಢನಂಬಿಕೆಗಳು (ಖುರಾಫಾತ್‌ಗಳು), ಶಿರ್ಕ್‌ಗಳು, ಮೃತರೊಂದಿಗೆ ಪ್ರಾರ್ಥಿಸುವುದು ಮುಂತಾದವುಗಳಲ್ಲಿ ಮುಳುಗಿಹೋಗಿದ್ದರು. ಇಂತಹ ಸ್ಥಿತಿಯ ಮಧ್ಯೆಯಾಗಿತ್ತು ಅಂದಿನ ವಿದ್ವಾಂಸರು ಇಂತಹ ಕಾರ್ಯಗಳ ಕುರಿತು ಜನರನ್ನು ಎಚ್ಚರಿಸದೆ ಇನ್ನಿತರ ವಿಷಯಗಳನ್ನು ಬೋಧಿಸಲು ನಿರತರಾದದ್ದು. ಇಂತಹ ಶೋಚನೀಯ ಸ್ಥಿತಿಗೆ ಗಮನ ಕೊಡದೆ ಇನ್ನಿತರ ಕಾರ್ಯಗಳಿಗೆ ಅವರು ಗಮನ ನೀಡುತ್ತಿದ್ದರು. ಆದರೆ ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رحمه الله) ರವರನ್ನು ಇವುಗಳೆಲ್ಲವನ್ನು ಕಂಡು ಮೌನವಹಿಸಲಿಲ್ಲ, ಬದಲಾಗಿ ಈ ವಿಷಯದಲ್ಲಿ ಅವರನ್ನು ತಡೆಯಲು ಹಾಗೂ ಕುರ್‌ಆನ್ ಮತ್ತು ಸುನ್ನತ್‌ನೆಡೆಗೆ ಆಹ್ವಾನಿಸುತ್ತಾ ಜನರ ಅಕೀದಃವನ್ನು ಸರಿಪಡಿಸಲು ಹಾಗೂ ಶುದ್ಧೀಕರಿಸಲು ಅವರು ಕಠಿಣವಾಗಿ ಶ್ರಮಿಸಿದರು.

ಇಂದು ಅದೆಷ್ಟೋ ಸತ್ಯವನ್ನರಿತ ಜನರಿರುವರು ಆದರೆ ಅದನ್ನವರು ಜನರಿಗೆ ವಿವರಿಸಿಕೊಡದೆ ಮುಚ್ಚಿಡುತ್ತಾರೆ. ಇದು ಯಹೂದಿಗಳ ಸ್ವಭಾವವಾಗಿದೆ. ಸತ್ಯತೆಯನ್ನು ವಿವರಿಸಿಕೊಡುವಂತೆ ಅವರೊಂದಿಗೆ ಅಲ್ಲಾಹು ಕರಾರನ್ನು ಪಡೆದಿರುವನು. ಸತ್ಯವನ್ನರಿತೂ, ಕಣ್ಣುಗಳಿದ್ದೂ ಕಾಣದವನಂತೆ, ಕಿವಿಯಿದ್ದರೂ ಕೇಳದವನಂತೆ ಐಹಿಕ ಲಾಭಕ್ಕಾಗಿ ನಟಿಸುವ ಅದೆಷ್ಟೋ ಜನರಿಲ್ಲವೇ? ಇಂದಿನ ಕಾಲಘಟ್ಟದಲ್ಲೂ ಅವರಿದ್ದಾರೆ. ಅವರ ಕುರಿತಂತೆ ಉಲಮಾಗಳು ಹೇಳುವುದು ಸತ್ಯತೆಯನ್ನರಿತ ವ್ಯಕ್ತಿಗಳು ಅವರ ದೌತ್ಯವನ್ನು ನಿರ್ವಹಿಸದೇ ಹೋಗುವುದಾದರೆ

ಅರ್ಥಾತ್ ಸತ್ಯವನ್ನು ಐಹಿಕ ಲಾಭಕ್ಕಾಗಿ ಮರೆಮಾಚಿದರೆ ಅವರು ಯಹೂದಿಗಳೊಂದಿಗೆ ಹೋಲಿಕೆಯಿರುವ ಜನರಾಗಿದ್ದಾರೆ.

ಪ್ರವಾದಿಗಳು ಹಾಗೂ ಅವರ ಅನುಚರರ ದೌತ್ಯವಾದ ಸತ್ಯತೆಯನ್ನು ಪ್ರತಿಷ್ಠಾಪಿಸುವುದು, ಕೆಡುಕನ್ನು ನಿರ್ಮೂಲನೆ ಮಾಡುವುದು, ಕುರ್ಆನ್ ಮತ್ತು ಸುನ್ನತ್‌ನೆಡೆಗೆ ಜನರನ್ನು ಆಹ್ವಾನಿಸುವುದು ಮುಂತಾದವುಗಳನ್ನು ನಿರ್ವಹಿಸಿದ ವ್ಯಕ್ತಿಯಾಗಿದ್ದರು ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رحمه الله). ಹೀಗೆ ಹಿಕ್ಮತ್‌ನೊಂದಿಗೆ (ಸುಜ್ಞಾನ ಮತ್ತು ವಿವೇಕದಿಂದ) ಹಾಗೂ ಉತ್ತಮ ಶೈಲಿಯೊಂದಿಗೆ ಜನರನ್ನು ಸತ್ಯತೆಯೆಡೆಗೆ ಆಹ್ವಾನಿಸುವುದಾಗಿ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رحمه الله) ಒಂದು ದೃಢಸಂಕಲ್ಪ ಕೈಗೊಂಡರು. ಹೀಗೆ ಅವರು ತಮ್ಮ ತಂದೆಯು ನ್ಯಾಯಾಧೀಶರಾಗಿದ್ದ ಸ್ಥಳವಾದ ಹುರೈಮಿಲಃದಿಂದ ತಂದೆಯ ಉಪಸ್ಥಿತಿಲ್ಲಿ ತಮ್ಮ ದಅ್‌ವಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಹೆಚ್ಚಿನ ಜನರು ಅವರ ಸತ್ಯತೆಯ ಆಹ್ವಾನವನ್ನು ಸ್ವೀಕರಿಸುತ್ತಿದ್ದರು. ಯಾವಾಗಲೂ ಪ್ರಾಮಾಣಿಕರಾದ ಜನರು ಸತ್ಯತೆಯು ಬಂದರೆ ಅದನ್ನು ಸ್ವೀಕರಿಸಿಕೊಳ್ಳುತ್ತಾರೆ ಅದು ಒಬ್ಬನಾದರೂ ಸರಿ. ತಮ್ಮ ದಅ್‌ವತ್‌ನಲ್ಲಿ ಸತ್ಯತೆಯಿದೆಯೆಂದಾದರೆ ಪ್ರಾಮಾಣಿಕತೆಯಿದೆ ಎಂದಾದರೆ ಅಲ್ಲಾಹು ಆ ದಅ್‌ವತ್‌ನಲ್ಲಿ ಸಮೃದ್ಧಿಯನ್ನಿರಿಸುವನು.

ತಮ್ಮ ತಂದೆಯವರ ಮರಣಾನಂತರ ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رحمه الله) ರವರಿಗೆ ಹುರೈಮಿಲಃದಲ್ಲಿ ಜೀವಬೆದರಿಕೆ ಉಂಟಾಯಿತು. ಅಲ್ಲಿದ್ದ ಗೂಂಡಾಗಳು ಪಥಭ್ರಷ್ಟರ ದುಷ್ಪ್ರೇರಣೆಯಿಂದಾಗಿ ಶೈಖುಲ್ ಇಸ್ಲಾಮ್‌ರವರಿಗೆ ಕಿರುಕುಳ ನೀಡಲು ಪ್ರಾರಂಭಿಸಿದರು. ಈ ಕಾರಣದಿಂದಾಗಿ ಅವರು ಹುರೈಮಿಲಃದಿಂದ ನಿರ್ಗಮಿಸಿದರು ಮತ್ತು ತಮ್ಮ ಜನನ ಸ್ಥಳವಾದ ಉಯಯ್‌ನಃಕ್ಕೆ ಮರಳಿದರು. ಉಸ್ಮಾನ್ ಬಿನ್ ಹಮ್ದ್ ಬಿನ್ ಮಅ್‌ಮರ್ ರವರು ಅಂದಿನ

ಉಯಯ್‌ನಃದ ಆಡಳಿತಗಾರರಾಗಿದ್ದರು. ಅವರು ಶೈಖುಲ್ ಇಸ್ಲಾಮ್‌ರವರನ್ನು ಮಾನ್ಯವಾಗಿ ಸ್ವಾಗತಿಸಿದರು ಹಾಗೂ ದಅ್‌ವಾ ಕಾರ್ಯಗಳಿಗೆ ಶೈಖುಲ್ ಇಸ್ಲಾಮ್‌ರವರೊಂದಿಗೆ ಕೈಜೋಡಿಸಿದರು. ಆದರೆ ಅದರ ಸಮೀಪ ಪ್ರದೇಶದ ಆಡಳಿತಗಾರನಾದ 'ಸುಲೈಮಾನ್ ಬಿನ್ ಉರೈಅರ್' ಅವನು ಶೈಖುಲ್ ಇಸ್ಲಾಮ್ ರವರ ದಅ್‌ವಾದಿಂದ ದಿಗ್ಭ್ರಾಂತಗೊಂಡನು ಹಾಗೂ ಶೈಖುಲ್ ಇಸ್ಲಾಮ್ ರವರನ್ನು ನಿರ್ನಾಮ ಮಾಡಬೇಕೆಂದು ಹೊಂಚುಹಾಕಿದನು.

ಅವನು ಉಯಯ್‌ನಃದ ಆಡಳಿತಗಾರರಾದ ಉಸ್ಮಾನ್ ಬಿನ್ ಹಮ್ದ್ ರವರೊಂದಿಗೆ ಶೈಖುಲ್ ಇಸ್ಲಾಮ್ ರವರನ್ನು ತನ್ನ ಕೈಗೊಪ್ಪಿಸುವಂತೆಯೂ ಇಲ್ಲದಿದ್ದಲ್ಲಿ ತಮ್ಮ ವಿರುದ್ಧ ಆಕ್ರಮಣ ನಡೆಸುವುದಾಗಿಯೂ ತಾಕೀತು ನೀಡಿದನು. ಆದರೆ ಉಸ್ಮಾನ್ ಬಿನ್ ಹಮ್ದ್ ರವರು ಶೈಖುಲ್ ಇಸ್ಲಾಮ್‌ರವರ ದಅ್‌ವಾ ಕಾರ್ಯಗಳಿಗೆ ಸ್ವತಃ ಬೆಂಬಲಿಗರಾಗಿದ್ದರಿಂದ ಅದು ಅವರಿಗೆ ಊಹಿಸಲೂ ಅಸಾಧ್ಯವಾದ ಮಾತಾಗಿತ್ತು. ಉಸ್ಮಾನ್ ಬಿನ್ ಹಮ್ದ್ ರವರು ತಕ್ಷಣ ಗಾಬರಿಯಿಂದ ಶೈಖುಲ್ ಇಸ್ಲಾಮ್‌ರವರ ಬಳಿ ಬಂದು ವಿಚಾರ ತಿಳಿಸಿದರು ಮತ್ತು ಅವರೊಂದಿಗೆ ಸುರಕ್ಷಿತ ಸ್ಥಳಕ್ಕೆ ಪಲಾಯನ ನಡೆಸುವಂತೆ ವಿನಂತಿಸಿದರು. ಈ ಕಾರಣಕ್ಕಾಗಿ ಶೈಖುಲ್ ಇಸ್ಲಾಮ್ ರವರು ಉಯಯ್‌ನಃ ದಿಂದ ದಿರ್‌ಇಯ್ಯಃಕ್ಕೆ ವಲಸೆ ಹೋದರು.

ದಿರ್‌ಇಯ್ಯಃದ ಜನರು ಶೈಖುಲ್ ಇಸ್ಲಾಮ್‌ರವರನ್ನು ಆದರದಿಂದ ಸ್ವಾಗತಿಸಿದರು. ಮುಹಮ್ಮದ್ ಬಿನ್ ಸಊದ್ (رَحِمَهُ ٱللَّٰهُ) ರವರು ಅಲ್ಲಿನ ಆಡಳಿತಗಾರರಾಗಿದ್ದರು. ಪ್ರಸ್ತುತ ಸೌದಿ ಅರೇಬಿಯಾದಲ್ಲಿ ಆಡಳಿತ ನಡೆಸುತ್ತಿರುವ ಕುಟುಂಬವಾದ ಆಲ್-ಸಊದ್ ಇದು ಮುಹಮ್ಮದ್ ಬಿನ್ ಸಊದ್ (رَحِمَهُ ٱللَّٰهُ) ರವರ ಕುಟುಂಬವಾಗಿದೆ. ಅವರು ಶ್ರೇಷ್ಠವಾದ ಆಲಿಮ್ ಹಾಗೂ ಅಮೀರ್ ಆಗಿದ್ದರು. ಅವರು ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರ ದಅ್‌ವಾವನ್ನು ಸ್ವೀಕರಿಸಿದರು. ಶೈಖುಲ್

ಇಸ್ಲಾಮ್‌ರವರಿಗೆ ಬೆಂಬಲ ನೀಡುತ್ತಾ ಸರ್ವಕ್ಕೂ ಅವರೊಂದಿಗೆ ಸಹಕರಿಸಿದರು. ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ) ರವರು ಮೊದಲು ಒಬ್ಬೊಂಟಿಯಾಗಿದ್ದರು ಆದರೆ ಅಲ್ಲಾಹು ಅವರ ದಅ್‌ವಾವನ್ನು ಜನರಿಗೆ ತಲುಪಿಸಿಕೊಟ್ಟನು ಹೀಗೆ ರಾಜರೂ ಕೂಡ ಅವರ ದಅ್‌ವಾವನ್ನು ಸ್ವೀಕರಿಸಿದರು.

ಕುರ್‌ಆನ್ ಹೇಳುತ್ತದೆ :

﴿وَمَن يَتَّقِ ٱللَّهَ يَجۡعَل لَّهُۥ مَخۡرَجٗا ۝٢ وَيَرۡزُقۡهُ مِنۡ حَيۡثُ لَا يَحۡتَسِبُۚ وَمَن يَتَوَكَّلۡ عَلَى ٱللَّهِ فَهُوَ حَسۡبُهُۥٓۚ﴾

**"ಯಾರು ಅಲ್ಲಾಹುವನ್ನು ಭಯಪಡುವನೋ ಅವನಿಗೆ ಅಲ್ಲಾಹು (ಸಂಕಟಗಳಿಂದ) ಹೊರಬರುವ ಮಾರ್ಗವನ್ನು ತೋರುವನು ಹಾಗೂ ಅವನು ಊಹಿಸಿರದ ಕಡೆಯಿಂದ ಅವನಿಗೆ ಅನ್ನಾಧಾರವನ್ನು ಒದಗಿಸುವನು. ಯಾರು ಅಲ್ಲಾಹುವಿನ ಮೇಲೆ ಭರವಸೆಯಿಡುವನೋ ಅವನಿಗೆ ಅಲ್ಲಾಹುವೇ ಸಾಕು."** [2]

ಯಾರು ಅಲ್ಲಾಹುವನ್ನು ಭಯಪಟ್ಟುಕೊಂಡು ಜೀವಿಸುತ್ತಾನೋ, ಹರಾಮ್ ಹಲಾಲ್‌ಗಳ ವಿಷಯದಲ್ಲಿ ಜಾಗರೂಕತೆ ವಹಿಸುವನೋ, ಅವನಿಗೆ ಸಂಕುಚಿತವಾದ ಜೀವನದಿಂದ ವಿಶಾಲವಾದ ಮಾರ್ಗವೊಂದನ್ನು ಅಲ್ಲಾಹು ತೋರಿಸಿಕೊಡುವನು, ಅವರ ಕಷ್ಟಗಳನ್ನು ಇಹಲೋಕದಲ್ಲೂ ಪರಲೋಕದಲ್ಲೂ ಅಲ್ಲಾಹು ಬಗೆಹರಿಸಿಕೊಡುವನು. ಅವರು ಭಾವಿಸದ ರೀತಿಯಲ್ಲಿ (ನಿರೀಕ್ಷೆಗೂ ಮೀರಿ) ಅವರಿಗೆ ಅಲ್ಲಾಹು ಅನ್ನಾಧಾರ ಒದಗಿಸುವನು. ಇಂದು ನಾವೆಲ್ಲರೂ ಅನ್ನಾಧಾರಕ್ಕಾಗಿ ಐಹಿಕ ಲೋಕದ ಹಿಂದೆ ಬಿದ್ದಿರುವೆವು. ಆದರೆ ಯಾರು ಅಲ್ಲಾಹುವಿನ ಶಿಕ್ಷೆಯ ಭಯವನ್ನಿಟ್ಟು ಹಾಗೂ ಪ್ರತಿಫಲದ ನಿರೀಕ್ಷೆಯೊಂದಿಗೆ ಅವನ ಆಜ್ಞೆ ಮತ್ತು

2. ಕುರ್‌ಆನ್ 65 : 2–3

ನಿಷೇಧಗಳನ್ನು ಪಾಲಿಸುತ್ತಾರೋ (ತಕ್ವಾ ಇಡುತ್ತಾರೋ) ಅವರ ಹಿಂದೆ ಐಹಿಕಲೋಕವು ಬರುವಂತೆ ಅಲ್ಲಾಹು ಮಾಡುವನು. ಯಾರು ಅಲ್ಲಾಹುವಿನ ಮೇಲೆ ಭರವಸೆನ್ನಿಡುತ್ತಾನೋ ಅವನಿಗೆ ಅಲ್ಲಾಹು ಸಾಕು. ಇದಾಗಿದೆ ನಾವು ವಿಶ್ವಾಸವಿಡಬೇಕಾಗಿರುವುದು. ಒಂದುವೇಳೆ ಅಲ್ಲಾಹು ನಮ್ಮ ಕೈಹಿಡಿದರೆ ಪ್ರಪಂಚದಲ್ಲಿರುವ ಸರ್ವರೂ ನಮ್ಮ ಕೈಬಿಟ್ಟರೂ ಏನೂ ಆಗಲು ಸಾಧ್ಯವಿಲ್ಲ. ಅಲ್ಲಾಹು ನಮ್ಮ ಕೈಹಿಡಿಯಬೇಕಾದರೆ ಅಲ್ಲಾಹುವಿಗೆ ನಿಕಟಗೊಳಿಸುವ ಕಾರ್ಯಗಳನ್ನು ನಾವು ನಿರ್ವಹಿಸಬೇಕಾಗಿದೆ. ಇನ್ನು ಪ್ರಪಂಚದಲ್ಲಿರುವ ಸರ್ವರೂ ನಮ್ಮ ಕೈಹಿಡಿದು ಅಲ್ಲಾಹು ಮಾತ್ರ ನಮ್ಮ ಕೈಬಿಟ್ಟರೆ ಇತರೆಲ್ಲರೂ ನಮ್ಮ ಕೈಹಿಡಿದರೂ ಅದು ಪ್ರಯೋಜಕ್ಕೆ ಬರದು. ನಾವು ಹೀನಾಯವಾಗಿ ನಾಶಹೊಂದುವೆವು. ಹಾಗಾಗಿ ಜನರ ಪ್ರಶಂಸೆಯನ್ನೋ ಅಥವಾ ತೃಪ್ತಿಯನ್ನೋ ಅಲ್ಲ ನಾವು ಅರಸಬೇಕಾಗಿರುವುದು ಬದಲಾಗಿ ನಾವು ಅರಸಬೇಕಾಗಿರುವುದು ಏಳು ಆಕಾಶಗಳು ಹಾಗೂ ಭೂಮಿಯ ರಬ್ಬ್ಆದ (ಪರಿಪಾಲಕನಾದ) ಅಲ್ಲಾಹುವಿನ ತೃಪ್ತಿಯನ್ನಾಗಿದೆ.

ಹೀಗೆ ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರು ತಮ್ಮ ದಅ್‌ವಾದ ಮುಂದುವರಿದ ಭಾಗವಾಗಿ ವಿವಿಧ ಪ್ರದೇಶಗಳ ಉಲಮಾಗಳಿಗೆ ಹಾಗೂ ಆಡಳಿತಗಾರರಿಗೆ ಪತ್ರಗಳನ್ನು ಬರೆಯಲಾರಂಭಿಸಿದರು. ಅವರನ್ನು ತೌಹೀದ್‌ನೆಡೆಗೆ ಆಹ್ವಾನಿಸಿದರು. ಇಸ್ಲಾಮ್ ಏನೆಂಬುದನ್ನು ಕುರ್‌ಆನ್ ಮತ್ತು ಸುನ್ನತ್‌ನ ಮೂಲಕ ವಿವರಿಸುವ ಮೂಲಕ ಅದನ್ನು ಅವರಿಗೆ ವ್ಯಕ್ತಪಡಿಸಿದರು. ಅವರು ಗ್ರಂಥ ಹಾಗೂ ಲೇಖನಗಳನ್ನು ಬರೆಯಲಾರಂಭಿಸಿದರು ಹಾಗೂ ಸತ್ಯತೆಯನ್ನು ವಂಚಿಸಿ ಮಿಥ್ಯತೆಯನ್ನು ಪ್ರತಿಪಾದಿಸುತ್ತಿದ್ದ ಜನರ ಸಂಶಯಗಳಿಗೆ ಸಮರ್ಪಕ ಉತ್ತರಗಳನ್ನು ನೀಡಿದರು.

ಹೀಗೆ ಸತ್ಯಾನ್ವೇಷಣೆ ನಡೆಸುತಿದ್ದ ಜನರು ಸತ್ಯತೆಯನ್ನು ಅರ್ಥಾತ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّٰهُ) ರವರ ದಅ್‌ವಾವನ್ನು ಸ್ವೀಕರಿಸಿದರು.

ಪ್ರಾಮಾಣಿಕವಾಗಿ ಸತ್ಯಾನ್ವೇಷಣೆ ನಡೆಸುವ ವ್ಯಕ್ತಿಗೆ ಕೇವಲ ಒಂದು ಪುರಾವೆಯು ಸಾಕಾಗುವುದು, ಆದರೆ ತಮ್ಮ ದೇಹೇಚ್ಚೆಯನ್ನು ಅನುಸರಿಸುವವರಿಗೆ ಹಾಗೂ ಪಥಭ್ರಷ್ಟರಿಗೆ ಸಾವಿರ ಪುರಾವೆಗಳನ್ನು ನೀಡಿದರೂ ಸಾಕಾಗದು.! ಪ್ರಾಮಾಣಿಕವಾಗಿ ಸತ್ಯಾನ್ವೇಷಣೆ ನಡೆಸುವ ಜನರಿಗೆ ಸತ್ಯತೆಯೇನೆಂದು ಮನದಟ್ಟಾದರೆ ಅವರು ಆ ಕೂಡಲೇ ಅದನ್ನು ಸ್ವೀಕರಿಸಿಕೊಳ್ಳುವರು.

ಅಶ್ಶೈಖ್ ಅಬ್ದುರ್ರಹ್ಮಾನ್ ನಾಸಿರ್ ಅಸ್ಸಅ್‌ದೀ (رَحِمَهُ اللَّهُ) ಹೇಳಿದರು :

« مَنْ تَرَكَ الْحَقَّ ابْتُلِيَ بِالْبَاطِلِ »

**“ಯಾರು ಸತ್ಯವನ್ನು ತೊರೆಯುವನೋ ಅವನು ಮಿಥ್ಯದ ಮೂಲಕ ಪರೀಕ್ಷಿಸಲ್ಪಡುವನು.”** [3]

ಓರ್ವ ವ್ಯಕ್ತಿಗೆ ಸತ್ಯತೆಯು ತಲುಪಿದ ನಂತರವೂ ಅದನ್ನವನು ಸ್ವೀಕರಿಸದೇ ಹೋದರೆ ನಂತರ ಅವನು ಒಳಗಾಗುವುದು ಮಿಥ್ಯತೆಗಾಗಿದೆ. ಹಾಗಾಗಿ ಯಾವಾಗ ಸತ್ಯತೆಯು ನಮ್ಮೆಡೆಗೆ ಬರುವುದೋ ಅದನ್ನು ನಾವು ತಕ್ಷಣ ಸ್ವೀಕರಿಸಬೇಕಾಗಿದೆ. ಇಲ್ಲದಿದ್ದಲ್ಲಿ ಅಲ್ಲಾಹು ಅವನನ್ನು ಮಿಥ್ಯತೆಯಲ್ಲಿ ಪರೀಕ್ಷಿಸುವನು.

ಹೀಗೆ ಪ್ರಾಮಾಣಿಕ ಸತ್ಯಾನ್ವೇಷಿಗಳು ಸತ್ಯತೆಯನ್ನು ಸ್ವೀಕರಿಸಿದರು. ಪಕ್ಷಪಾತ ತೋರುವವರು ಸತ್ಯವನ್ನು ತಿರಸ್ಕರಿಸಿದರು. ಶೈಖುಲ್ ಇಸ್ಲಾಮ್ (رَحِمَهُ اللَّهُ) ರವರು ಜನರನ್ನು ಸರಿಯಾದ ವಿಶ್ವಾಸದೆಡೆಗೆ (ಅಕೀದಃದೆಡೆಗೆ) ಮತ್ತು ಅಲ್ಲಾಹುವನ್ನು ಏಕಮಾತ್ರವಾಗಿ ಆರಾಧಿಸುವುದರೆಡೆಗೆ (ತೌಹೀದ್‌ನೆಡೆಗೆ) ಆಹ್ವಾನಿಸಿದರು. ಅವರು

3. ತಫ್ಸೀರ್ ಅಸ್ಸಅ್‌ದೀ 2 : 101

ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳ ಪೈಕಿ ಅತ್ಯಂತ ಪ್ರಸಿದ್ಧವಾದುದು ನಾವೀಗ ಅಧ್ಯಯನ ನಡೆಸಲು ಹೋಗುತ್ತಿರುವ ಗ್ರಂಥ **'ಕಿತಾಬ್ ಅತ್ತೌಹೀದ್'** ಆಗಿದೆ. ಇದನ್ನು ಅಧ್ಯಯನ ನಡೆಸುವುದರಲ್ಲಿ ಮತ್ತು ವಿವರಿಸುವುದರಲ್ಲಿ ಕಾಳಜಿವಹಿಸಿರುವ ವಿದ್ವಾಂಸರು ಮತ್ತು ವಿದ್ಯಾರ್ಥಿಗಳಲ್ಲಿ ಇದು ಅತ್ಯತ್ತಮ ಮನ್ನಣೆಯನ್ನು ಗಳಿಸಿದೆ. ಇದು ಬಹಳ ಉಪಯುಕ್ತಕರ ಮಾಹಿತಿಗಳಿಂದ ಕೂಡಿರುವ ಅದ್ಭುತ ಗ್ರಂಥವಾಗಿದೆ. ಇದರಿಂದ ಅಲ್ಲಾಹು ಅನೇಕರಿಗೆ ಪ್ರಯೋಜನವನ್ನು ನೀಡಿರುವನು. ಈ ಗ್ರಂಥವನ್ನು ಇಂದಿಗೂ ಉಲಮಾಗಳು ಮಕ್ಕಾದಲ್ಲೂ ಮದೀನಾದಲ್ಲೂ ಪ್ರಪಂಚದ ನಾನಾ ಭಾಗಗಳಲ್ಲೂ ಜನರಿಗೆ ಕಲಿಸಿಕೊಡುತ್ತಿದ್ದಾರೆ.

ಶೈಖುಲ್ ಇಸ್ಲಾಮ್‌ರವರು ಸರ್ವಶಕ್ತನಾದ ಅಲ್ಲಾಹುವಿನೆಡೆಗೆ ಜನರನ್ನು ಆಹ್ವಾನಿಸುವವರಾಗಿ, ಒಳಿತನ್ನು ಆದೇಶಿಸುತ್ತಾ ಮತ್ತು ಕೆಡುಕನ್ನು ವಿರೋಧಿಸುತ್ತಾ ತಮ್ಮ ಜೀವನಪೂರ್ತಿ ಶಿಕ್ಷಕರಾಗಿಯೇ ಉಳಿದುಕೊಂಡರು. ಅವರು ರಿಯಾದ್‌ನ ಸಮೀಪದ ದಿರ್‌ಇಯ್ಯಃದಲ್ಲಿ ಹಿಜ್ರ 1206 ರಲ್ಲಿ ಮರಣಹೊಂದಿದರು. ಅವರು ಮರಣ ಹೊಂದುವಾಗ ಅವರ ವಯಸ್ಸು 91 ವರ್ಷಗಳಾಗಿತ್ತು.

ಅವರ ಬಳಿ ಅನೇಕ ವಿದ್ವಾಂಸರು ಮತ್ತು ಇಸ್ಲಾಮ್‌ನೆಡೆಗೆ ಆಹ್ವಾನಿಸುವ ಇಮಾಮ್‌ಗಳು (ಧಾರ್ಮಿಕ) ಶಿಕ್ಷಣವನ್ನು ಪಡೆದುಕೊಂಡರು. ಆ ಊರಿನ ರಾಜರಾದ ಅಮೀರ್ ಮುಹಮ್ಮದ್ ಬಿನ್ ಸಊದ್ (رحمه الله) ರವರು ಸ್ವತಃ ಶೈಖುಲ್ ಇಸ್ಲಾಮ್‌ರವರ ಬಳಿ ಬಂದು ಇಲ್ಮ್ ಪಡೆಯುತ್ತಿದ್ದರು. ಆದರೆ ನಮ್ಮ ಊರಿನಲ್ಲಿಂದು ಸಮುದಾಯದ ನೇತೃತ್ವ ವಹಿಸುತ್ತಿರುವ ವ್ಯಕ್ತಿಗಳು ಇಲ್ಮ್ ಇಲ್ಲದವರಾಗಿದ್ದಾರೆ. ಇಂದು ಇಸ್ಲಾಮಿನ ಹೆಸರಿನಲ್ಲಿ ಅನೇಕ ಸಂಘ-ಸಂಸ್ಥೆಗಳನ್ನು ನಡೆಸುತ್ತಿರುವವರು ಅಲ್ಪ ಮಟ್ಟಿನ ಪ್ರಾಥಮಿಕ ಇಲ್ಮ್ ಕೂಡ ಇಲ್ಲದವಾಗಿದ್ದಾರೆ. ಸರಿಯಾದ ಅಕೀದಃ, ಮನ್‌ಹಜ್ ಏನೆಂದು ತಿಳಿಯದ ವ್ಯಕ್ತಿಗಳಾಗಿದ್ದಾರೆ. ಆದರೆ ಅಮೀರ್ ಮುಹಮ್ಮದ್ ಬಿನ್ ಸಊದ್ (رحمه الله) ರವರು ರಾಜರಾಗಿದ್ದರೂ ಸ್ವತಃ

ಇಲ್ಮ್ ಕಲಿಯುತಿದ್ದರು ಮಾತ್ರವಲ್ಲ ತಮ್ಮ ಮಕ್ಕಳನ್ನೂ ಶೈಖುಲ್ ಇಸ್ಲಾಮ್‌ರವರೆಡೆಗೆ ಇಲ್ಮ್ ಕಲಿಯಲು ಕಳುಹಿಸಿಕೊಡುತ್ತಿದ್ದರು.

ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಬ್ (رَحِمَهُ اللهُ) ರವರ ದಅ್‌ವಾದ ಪರಿಣಾಮದಿಂದಾಗಿ ಸೌದಿ ಅರೇಬಿಯಾ ಹೊರತಾದ ಇತರ ವಿದೇಶಗಳ ಜನರೂ ಕೂಡ ಸತ್ಯವನ್ನು ಸ್ವೀಕರಿಸಿದರು. ಅವರ ದಅ್‌ವಾದ ಅತ್ಯಂತ ಶ್ರೇಷ್ಠ ಪರಿಣಾಮವೇನೆಂದರೆ ಒಂದು ತೌಹೀದ್‌ನ ನಾಡು ನೆಲೆನಿಂತಿತು.

ಇವರಾಗಿದ್ದಾರೆ ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್-ವಹ್ಹಾಬ್ (رَحِمَهُ اللهُ). ಉಲಮಾಗಳು ಪ್ರವಾದಿಗಳ ವಾರೀಸುದಾರರಾಗಿರುವರು. ಅದೆಷ್ಟೋ ಪಥಭ್ರಷ್ಟರಾದ ಜನರಿಗೆ ಸನ್ಮಾರ್ಗ ತೋರಿಸಿಕೊಟ್ಟ ಜನರಾಗಿರುವರು. ಈ ಕಾರಣಕ್ಕಾಗಿ ಪಥಭ್ರಷ್ಟ ಜನರು ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ನೇರವಾಗಿ ವಂಚಿಸಿದರೆ ಅಸಲಿ ಮುಖ ಬಯಲಾಗುವುದೆಂಬ ಭೀತಿಯಿಚಿದ ಪ್ರವಾದಿಗಳ ವಾರೀಸುದಾರರಾಗಿರುವ ಉಲಮಾಗಳ ಜೊತೆ ಜನರ ಉತ್ತಮ ಬಾಂಧವ್ಯ ಮತ್ತು ಒಡನಾಟವನ್ನು ಕತ್ತರಿಸಲು ಮಹಾ ಷಡ್ಯಂತ್ರವನ್ನು ರೂಪಿಸುತ್ತಿರುವರು. ಒಂದು ವೇಳೆ ಎಲ್ಲರೂ ಉಲಮಾಗಳ ಮಾರ್ಗದರ್ಶನವನ್ನು ಅನುಸರಿಸಿದರೆ ಇವರೆಡೆಗೆ ಯಾರೂ ಹೋಗಲಾರರು ತಮ್ಮ ಸಂಘಟನೆಯೆಡೆಗೆ ಯಾರೂ ಬರಲಾರರೆಂದು ಅವರು "ನಾವು ಉಲಮಾಗಳನ್ನು ತಕ್‌ಲೀದ್ ಮಾಡುವುದಿಲ್ಲ" ಎಂದು ಹೇಳುತ್ತಾ ಜನರನ್ನು ವಂಚಿಸುತ್ತಿರುವರು. ಉಲಮಾಗಳು ನಿಮ್ಮನ್ನು ಆಹ್ವಾನಿಸುತ್ತಿರುವುದು ಅವರ ಅಂಧಾನುಕರಣೆಗಲ್ಲ (ತಕ್‌ಲೀದ್‌ಗಲ್ಲ) ಬದಲಾಗಿ ಅವರು ನಿಮ್ಮನ್ನು ಆಹ್ವಾನಿಸುತ್ತಿರುವುದು ಕುರ್‌ಆನ್ ಮತ್ತು ಸುನ್ನತ್‌ನೆಡೆಗಾಗಿದೆ. ಹಾಗಾಗಿ ಸಹೋದರರೇ ಇವರ ಷಡ್ಯಂತ್ರವನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ. ಉಲಮಾಗಳ ಸ್ಥಾನವನ್ನು ನಾವು ಅರಿತುಕೊಳ್ಳಬೇಕಾಗಿದೆ.

ಸತ್ಯದ ಮೇಲೆ ನೆಲೆನಿಲ್ಲಲು, ಸತ್ಯವನ್ನು ಸ್ವೀಕರಿಸಿಕೊಳ್ಳಲು, ಮರಣಹೊಂದುವ ತನಕ ಸತ್ಯತೆಯ ಮೇಲೆ ಸ್ಥಿರವಾಗಿರಲು, ರಸೂಲ್ (ﷺ) ರವರು ಅವರ ಸಹಾಬಿಗಳು ಹಾಗೂ ಉಲಮಾಗಳು ಯಾವ ಮಾರ್ಗದಲ್ಲಿದ್ದರೋ ಆ ಮಾರ್ಗದಲ್ಲಿ ದೃಢವಾಗಿ ನಿಲ್ಲಲು ಅಲ್ಲಾಹು (سُبْحَانَهُ وَتَعَالَىٰ) ನಮಗೂ ನಮ್ಮ ಕುಟುಂಬಕ್ಕೂ ಅನುಗ್ರಹಿಸಲಿ – ಆಮೀನ್.

ಅತ್ಯುತ್ತಮವಾಗಿ ಅರಿತವನು ಅಲ್ಲಾಹುವಾಗಿರುವನು. ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ನಮ್ಮ ಪ್ರವಾದಿಯವರ ಮೇಲೆ, ಅವರ ಕುಟುಂಬದವರ ಮೇಲೆ ಹಾಗೂ ಅವರ ಸಹಚರರ ಮೇಲೆ ಸದಾ ಇರಲಿ.